**ಸಾಕ್ಷಿಯನ್ನು ದಿನಾಂಕ: 28-06-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ :- ಪ್ರತಿವಾದಿ ಪರ ವಕೀಲರಾದ ಶ್ರೀ.ಡಿ.ಎಸ್.ಪ್ರಭಾಕರ್ ರವರಿಂದಃ**

ಪೋಡಿ ತಖ್ತೆ, ಒಂದು ಲಿಸ್ಟ್ ಮತ್ತು ಪೋಡಿಯಂತೆ ಕರ್ದೆಯ ದೃಢೀಕೃತ ದಾಖಲೆಯನ್ನು ಹಾಜರು ಮಾಡಿರುತ್ತೇನೆ. ಎಲ್ಲಾ ದಾಖಲೆಗಳನ್ನು ಕ್ರಮವಾಗಿ **ನಿಡಿ-4 ರಿಂದ ನಿಡಿ-6 ಎಂದು ಗುರುತಿಸಲಾಯಿತು**.

ಒಂದು ರೆವೆನ್ಯೂ ಸ್ಕೆಚ್ ನ ದೃಢೀಕೃತ ನಕಲು, ಒಂದು ಐಎಲ್ಆರ್ ನ ದೃಢೀಕೃತ ನಕಲು, ಒಂದು ಹಿಂಬರಹವನ್ನು, ಒಂದು ಹಕ್ಕು ಬದಲಾವಣೆ ವಹಿಯ ದೃಢೀಕೃತ ನಕಲು, 23 ದೃಢೀಕೃತ ಹಾಗೂ ಗಣಕೀಕೃತ ಪಹಣಿ ಪತ್ರಿಕೆಗಳು, 4 ರಶೀದಿ ಮತ್ತು ಪಟ್ಟಾ ಪುಸ್ತಕಗಳು ಮತ್ತು 4 ಕಂದಾಯ ಕಟ್ಟಿದ ರಶೀದಿಗಳನ್ನು ಹಾಜರು ಮಾಡಿದ್ದೇನೆ. ಎಲ್ಲಾ ದಾಖಲೆಗಳನ್ನು ಕ್ರಮವಾಗಿ **ನಿಡಿ-7 ರಿಂದ ನಿಡಿ-42 ಎಂದು ಗುರುತಿಸಲಾಯಿತು**.

ಸಾಗುವಳಿ ಚೀಟಿ ದಸ್ತಾವೇಜಿನ ದೃಢೀಕೃತ ನಕಲು, Records of Rights & Index of Land ನ ದೃಢೀಕೃತ ನಕಲುಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ಕ್ರಮವಾಗಿ **ನಿಡಿ-43 ರಿಂದ ನಿಡಿ-46 ಎಂದು ಗುರುತಿಸಲಾಯಿತು**.

ಉಪವಿಭಾಗಾಧಿಕಾರಿಗಳ ಆದೇಶದ ದೃಢೀಕೃತ ನಕಲು, ಎರಡು ಮಹಜರುಗಳ ದೃಢೀಕೃತ ನಕಲುಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ಕ್ರಮವಾಗಿ **ನಿಡಿ-47 ರಿಂದ ನಿಡಿ-49 ಎಂದು ಗುರುತಿಸಲಾಯಿತು**.

ಮೂರು ನಕಾಶೆಗಳ ದೃಢೀಕೃತ ನಕಲುಗಳು, ನಮೂನೆ ಸಂಖ್ಯೆ 5 ರ ದೃಢೀಕೃತ ನಕಲು ಮತ್ತು ಆಕಾರ ಬಂದ ನ ದೃಢೀಕೃತ ನಕಲು, ಒಂದು ಪಟ್ಟಾ ರಶೀದಿ ಪುಸ್ತಕ ಮತ್ತು ಒಂದು ಕಂದಾಯ ಕಟ್ಟಿದ ರಶೀದಿ ಹಾಜರು ಮಾಡಿದ್ದೇನೆ. ಅವುಗಳನ್ನು ಕ್ರಮವಾಗಿ **ನಿಡಿ-50 ರಿಂದ ನಿಡಿ-57 ಎಂದು ಗುರುತಿಸಲಾಯಿತು**.

ಒಂದು ಗಣಕೀಕೃತ ಹಕ್ಕು ಬದಲಾವಣೆ ವಹಿ ಹಾಗೂ 20 ದೃಢೀಕೃತ ಹಾಗೂ ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ಕ್ರಮವಾಗಿ **ನಿಡಿ-58 ರಿಂದ ನಿಡಿ-78 ಎಂದು ಗುರುತಿಸಲಾಯಿತು**.

ದಿನಾಂಕಃ 18-04-1963 ರ ಒಂದು ಕ್ರಯಪತ್ರದ ದೃಢೀಕೃತ ನಕಲು, ಮೂರು ಋಣಭಾರ ಪತ್ರಿಕೆಗಳ ದೃಢೀಕೃತ ನಕಲುಗಳು, ಎರಡು ಹಿಂಬರಹಗಳು, ಮೂರು ದೃಢೀಕೃತ ಪಹಣಿ ಪತ್ರಿಕೆಗಳು ಮತ್ತು ಒಂದು ಗಣಕೀಕೃತ ಪಹಣಿ ಪತ್ರಿಕೆ, ಒಂದು ಗಣಕೀಕೃತ ಹಕ್ಕು ಬದಲಾವಣೆಯ ವಹಿಯ ದೃಢೀಕೃತ ನಕಲು, ನನ್ನ ತಾತನ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೇನೆ. ಎಲ್ಲಾ ದಾಖಲೆಗಳನ್ನು ಕ್ರಮವಾಗಿ ನಿಡಿ**-79** ರಿಂದ ನಿಡಿ**-90** ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ವಜಾ ಮಾಡುವಂತೆ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು :-** ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**